ಒ ಎಸ್ ನಂ.290/2012
ಡಿ.ಡಬ್ಲ್ಯೂಃ 2 ಹಾಜರು

ದಿನಾಂಕಃ 05-07-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀ ಸವಾಲು ಶ್ರೀಯುತ ಎಸ್ ಆರ್ ಡಿ ವಕೀಲರಿಂದಃ

ಮೊದಲು ನಾನು ವಾದಿ ಮತ್ತು 7 ನೇ ಪ್ರತಿವಾದಿ ಹಳ್ಳಿ ಹಳ್ಳಿಗೆ ಬಟ್ಟೆ ಮಾರಾಟ ಮಾಡಲು ಹೋಗುತ್ತಿದ್ದೇವು ಎಂದರೆ ಸರಿ. ಆ ಸಮಯದಲ್ಲಿ ಮೊದಲನೆ ಪ್ರತಿವಾದಿ ಚಿಕ್ಕ ಚಹಾದ ಅಂಗಡಿ ಇಟ್ಟುಕೊಂಡು ಟೈಲರಿಂಗ ಮಾಡುತ್ತಿದ್ದರು ಎಂದರೆ ಸಾಕ್ಷಿ ಟೈಲರಿಂಗ ಮಾತ್ರ ಮಾಡತ್ತಿದ್ದರು ಎಂದು ನುಡಿದಿರುತ್ತಾರೆ ನಾನು ಮತ್ತು ಮೊದಲನೆ ಪ್ರತಿವಾದಿ ನನ್ನ ಎಲ್ಲಾ ತಮ್ಮಂದಿರಿಗೆ ಶಿಕ್ಷಣ ನೀಡಿಸಿದ್ದೇವೆ ಎಂದರೆ ಸರಿ. ಈಗ ಪ್ರಶಾಂತ ಲಾಡ್ಜ ಇರುವ ಸ್ಥಳದಲ್ಲಿ ಮೊದಲು ಒಂದು ಹಳೆ ಮನೆ ಇತ್ತು ಎಂದರೆ ಸರಿ. ಸದರಿ ಮನೆಯಲ್ಲಿಯೇ ನಾವೆಲ್ಲರೂ ವಾಸ ಮಾಡಿಕೊಂಡಿದ್ದೇವೆ ಎಂದರೆ ಸರಿ. 1962 ರಲ್ಲಿ ದಿಲ್ಲಿ ರೆಡಿಮೆಡ ಸ್ಟೋರ್ಸ ಎಂಬ ಅಂಗಡಿಯನ್ನು ನಾವೆಲ್ಲಾ ಅಣ್ಣ ತಮ್ಮಂದಿರು ಪ್ರಾರಂಭಿಸಿದ್ದೇವೆ ಎಂದರೆ ಸರಿ. ಸದರಿ ಅಂಗಡಿಗೆ ನಾನು ಮತ್ತು ವಾದಿ ಮಾಲ ನ್ನು ತಂದು ಕೊಡುತ್ತಿದ್ದೇವು ಮತ್ತು 7 ನೇ ಪ್ರತಿವಾದಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸಾಕ್ಷಿ ಎಲ್ಲರೂ ಕೂಡಿಯೇ ಮಾಡುತ್ತಿದ್ದೇವು ಎಂದು ನುಡಿದಿರುತ್ತಾರೆ. ನಮ್ಮ ವ್ಯಾಪಾರ ಅಭಿವೃದ್ದಿ ನಂತರ ನಾವು ಮನೆಯನ್ನು ಕೆಡವಿ ಪ್ರಶಾಂತ ಲಾಡ್ಜ ಎಲ್ಲರೂ ಕೂಡಿಯೇ ಮಾಡಿದ್ದೇವು ಎಂದರೆ ಸರಿ. ಅದನ್ನು 1981 ರಲ್ಲಿ ಕಟ್ಟಿಸಲಾಗಿದೆ ಎಂದರೆ ಸರಿ.

1982 ರಲ್ಲಿ ವಾದಿ, ನನ್ನ, 7 ನೇ ಪ್ರತಿವಾದಿ ಮತ್ತು 11 ನೇ ಪ್ರತಿವಾದಿಯ ಮದುವೆ ಒಟ್ಟಿಗೆಯಾಗಿದೆ ಎಂದರೆ ಸರಿ. ಸದರಿ ಎಲ್ಲರ ಮದುವೆಯನ್ನು ಮೊದಲನೆ ಪ್ರತಿವಾದಿಯೇ ಮಾಡಿದ್ದಾನೆ ಎಂದರೆ ಸರಿ. 1985 ರಲ್ಲಿ ನ್ಯೂ ದಿಲ್ಲಿ ಅಪೆರೆಲ್ಸ ಅಂಗಡಿ ಮಾಡಿದ್ದೇವೆ ಎಂದರೆ ಸಾಕ್ಷಿ ನಾನು ಅದನ್ನು ಸ್ವಂತ ನಾತೆಯಿಂದ ಮಾಡಿದ್ದೆ ಎಂದು ನುಡಿದಿರುತ್ತಾರೆ. 1997 ರಲ್ಲಿ ನಾವೆಲ್ಲಾ ಅಣ್ಣ ತಮ್ಮಂದಿರು ದಿಲ್ಲಿ ಸಲೆಕ್ಷನ ಎಂಬ ಅಂಗಡಿಯನ್ನು ಪ್ರಾರಂಭಿಸಿದ್ದೇವೆ ಎಂದರೆ ಸರಿ. 1998 ರಲಿ ನಾವೆಲ್ಲಾ ಅಣ್ಣ ತಮ್ಮಂದಿರು ಸೇರಿ ದಿಲ್ಲಿ ಟೆಕ್ಸಟೈಲ್ಸ ಎಂಬ ಅಂಗಡಿಯನ್ನು ಪ್ರಾರಂಬಿಸಿದ್ದೇವು ಎಂದರೆ ಸರಿ. ನಾವೆಲ್ಲಾ ಅಣ್ಣ ತಮ್ಮಂದಿರು ಒಬ್ಬೊಬ್ಬರಾಗಿ ಒಂದೊಂದು ವ್ಯವಹಾರವನ್ನು ನೋಡಿಕೊಂಡು ಹೋಗಿದ್ದೇವೆ ಎಂದರೆ ಸರಿ.

2010 ರಲ್ಲಿ ನಾವೇಲ್ಲಾ ಅಣ್ಣ ತಮ್ಮಂದಿರು ಚಿತ್ರಾ ಟಾಕೀಸ್ ಎದುರುಗಡೆ ಕಮತಗೌಡ ಎಂಬ ಆಸ್ತಿಯನ್ನು ಖರೀದಿಸಿದ್ದೇವೆ ಎಂದರೆ ಸಾಕ್ಷಿ 1976 ರಲ್ಲಿ ಎಂದು ನುಡಿದಿರುತ್ತಾರೆ. ಸದರಿ ಜಾಗೆಯನ್ನು ನಾವೇಲ್ಲಾ ಅಣ್ಣ ತಮ್ಮಂದಿರು ಒಟ್ಟಿಗೆ ಮನೆ ಕಟ್ಟಿಸಿದ್ದೇವೆ ಎಂದರೆ ಸರಿ. ಈಗ ಮೊದಲನೆ ಪ್ರತಿವಾದಿ ನನ್ನ ಮೊಬೈಲ್ ಅಂಗಡಿಯಲ್ಲಿ ಇರುತ್ತಾರೆ ಎಂದರೆ ಸಾಕ್ಷಿ ನಾವೆಲ್ಲರೂ ಒಟ್ಟಿಗೆ ಮಾಡಿರುವ ಶುಭಂ ಅಂಗಡಿಯಲ್ಲಿ ಇರುತ್ತಾರೆಂದು ನುಡಿದಿರುತ್ತಾರೆ. ಮೊದಲನೆ ಪ್ರತಿವಾದಿ ಸದೃಢವಾಗಿದ್ದಾರೆ ಎಂದರೆ ಸರಿ. ನಾವೇಲ್ಲಾ ಅಣ್ಣ ತಮ್ಮಂದಿರು ನಮ್ಮ ಆದಾಯ ಹೆಚ್ಚಾಗಿದ್ದರಿಂದ ದಾವಾ ಐಟಮ ನಂ.1 ಮತ್ತು 2 ನ್ನು 1971 ರಲ್ಲಿ ಖರೀದಿಸಿದ್ದೇವೆ ಎಂದರೆ ಸರಿ. ಸದರಿ ಎರಡೂ ಆಸ್ತಿಗಳನ್ನು ಮಾರಾಟ ಮಾಡಿ ನಮ್ಮ ಅಣ್ಣ ತಮ್ಮಂದಿರು ತಮ್ಮ ವ್ಯವಹಾರಗಳನ್ನು ಅಭಿವೃದ್ಧಿ ಪಡಿಸಿದಾರೆ ಎಂದರೆ ಸಾಕ್ಷಿ ಸದರಿ ಹಣವನ್ನು ಅವುಗಳನ್ನು ಮಾರಾಟ ಮಾಡಿದವರೇ ಸ್ವಂತಕ್ಕಾಗಿ ಇಟ್ಟುಕೊಂಡಿದ್ದಾರೆಂದು ನುಡಿದಿರುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿದ ಆಸ್ತಿಗಳ ನನ್ನ ಸ್ವಂತ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ನಮ್ಮಲ್ಲಿ ಇನ್ನು ವಾಟ್ನಿಯಾಗಿಲ್ಲ ಮತ್ತು ವ್ಯವಹಾರದ ದೃಷ್ಟಿಯಿಂದ ನಾವು ಬೇರೆ ಬೇರೆ ವ್ಯವಹಾರಗಳನ್ನು ನೋಡಿಕೊಳ್ಳುತ್ತೇವೆ ಎಂದರೆ ಸಾಕ್ಷಿ ಹೌದು ಆದರೆ ನನ್ನ ಆಸ್ತಿಗಳು ನನ್ನ ವೈಯಕ್ತಿಕ ಎಂದು ನುಡಿದಿರುತ್ತಾರೆ.

ನಮ್ಮ ಅಣ್ಣ-ತಮ್ಮಂದಿರಲ್ಲಿ ನ್ಯಾಯಾಲಯದಲ್ಲಾಗಲೀ ಅಥವಾ ನೊಂದಾವಣಾಧಿಕಾರಿಗಳ ಕಚೇರಿಯಲ್ಲಾಗಲೀ ವಾಟ್ನಿಯಾಗಿಲ್ಲ ಎಂದರೆ ಸಾಕ್ಷಿ ನಾನು ಖರೀದಿ ಮಾಡಿ ಆಸ್ತಿಗಳನ್ನು ಹೊರತು ಪಡಿಸಿ ಉಳಿದ ಆಸ್ತಿಗಳಲ್ಲಿ ವಾಟ್ನಿಯಾಗಿಲ್ಲವೆಂದು ನುಡಿದಿರುತ್ತಾರೆ. ನಾವು ವ್ಯವಹಾರಗಳನ್ನು ನೋಡಿಕೊಳ್ಳಲು ಮತ್ತು ಅಡುಗೆಯ ಉದ್ದೇಶದಿಂದ ಮಾತ್ರ ಬೇರೆ ಬೇರೆ ಮನೆಯನ್ನು ಮಾಡಿದ್ದೇವೆ ಎಂದರೆ ಸಾಕ್ಷಿ ಇನ್ನು ಹಳೆ ಮನೆಗೆ ಹೋಗಿ ಬಂದು ಮಾಡುತ್ತೇವೆಂದು ನುಡಿದಿರುತ್ತಾರೆ.

ಇನ್ನುಳಿದ ಪ್ರತಿವಾದಿಗಳ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ